**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.839/2014/ಸನಿಕಾಸ–2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:8.6.2017.

12

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ**

**ವಿಷಯ:–** ಶ್ರೀ ಕುಮಾರಸ್ವಾಮಿ, ತಹಶೀಲ್ದಾರ್, ಹೊಸಕೋಟೆ, ಇವರ ವಿರುದ್ದ ಕ್ರಮಕೈಗೊಳ್ಳುವ ಬಗ್ಗೆ.

*******

ಶ್ರೀ ಶಿವರಾಜ್.ಪಿ., ತಂದೆ ಪಾಪಣ್ಣ, ಕನ್ನೂರಹಳ್ಳಿ ಗ್ರಾಮದ ನಿವಾಸಿ, ಹೊಸಕೋಟೆ ತಾಲ್ಲೂಕು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ಕುಮಾರಸ್ವಾಮಿ, ತಹಶೀಲ್ದಾರ್, ಹೊಸಕೋಟೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ಹೊಸಕೋಟೆ ತಾಲ್ಲೂಕು ಅರೆಹಳ್ಳಿ ಗ್ರಾಮದಲ್ಲಿ ಮರಿಯಪ್ಪ ಬಿನ್ ಮುನಿಯಲ್ಲಪ್ಪ ಎನ್ನುವವರು ಸೀಮೆಎಣ್ಣೆ ವಿತರಿಸುತ್ತಿದ್ದು, ಆದರೆ ಅವರ ಹೆಸರಿನಲ್ಲಿ ಲೈಸೆನ್ಸ್ ಇರುವುದಿಲ್ಲ. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಲ್ಲಿ ಈ ಬಗ್ಗೆ ಮಾಹಿತಿ ಕೇಳಿದಾಗ ಲೈಸೆನ್ಸ್ ನಂ.19/97–98 ಗಂಗಪ್ಪ ಎಂಬುವವರ ಹೆಸರಿನಲ್ಲಿರುತ್ತದೆ. ಆದರೆ ಗಂಗಪ್ಪ ಎನ್ನುವವರು ಅರೆಹಳ್ಳಿ ಗ್ರಾಮದಲ್ಲಿ ಯಾರೂ ವಾಸವಿರುವುದಿಲ್ಲವೆಂದು ತಿಳಿಸಿರುತ್ತಾರೆ. ಇದರಿಂದ ಕಂಡುಬರುವುದೇನೆಂದರೆ ಎದುರುದಾರರು ಈ ಅಕ್ರಮದಲ್ಲಿ ಷಾಮೀಲಾಗಿ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆಂದು ಕಂಡುಬರುತ್ತದೆ. ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ತಪ್ಪಿತಸ್ಥರ ವಿರುದ್ದ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

158

3. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಅರೆಹಳ್ಳಿ ಗ್ರಾಮದಲ್ಲಿ ವಿಚಾರಿಸಿದಾಗ ಗಂಗಪ್ಪ ಅವರನ್ನು ಮರಿಯಪ್ಪ, ಕಬ್ಬಾಳಪ್ಪ ಎಂದು ಸಹ ಸಾರ್ವಜನಿಕವಾಗಿ ಕರೆಯುತ್ತಾರೆ. ಹೀಗಾಗಿ ಅವರು ಸೀಮೆ ಎಣ್ಣೆ ವಿತರಿಸುತ್ತಾರೆಂದು ತಿಳಿಸಿರುತ್ತಾರೆ. ಸೀಮೆ ಎಣ್ಣೆ ವಿತರಿಸುವ ಸ್ಥಳ ಮತ್ತು ಲೆಕ್ಕಪತ್ರ ಪರಿಶೀಲಿಸಿದಾಗ ಅನೇಕ ನ್ಯೂನ್ಯತೆಗಳು ಕಂಡುಬಂದಿರುವ ಕಾರಣ ಇವರ ವಿರುದ್ಧ ಕ್ರಮ ಜರುಗಿಸಬಹುದೆಂದು ಮಾನ್ಯ ಉಪವಿಭಾಗಾಧಿಕಾರಿಗಳಿಗೆ ಪತ್ರ ಬರೆದಿರುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರ ಸಲ್ಲಿಸಿರುವುದಿಲ್ಲ.

5. ದೂರುದಾರರು ಸಲ್ಲಿಸಿದ ದೂರು ಆಕ್ಷೇಪಣೆ, ಪ್ರತ್ಯುತ್ತರ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ಈ ಪ್ರಕರಣದಲ್ಲಿ ದೂರಿನಲ್ಲಿನ ಅಂಶಗಳ ಬಗ್ಗೆ ತನಿಖೆ ಮಾಡಲು ಮಾನ್ಯ ಉಪವಿಭಾಗಾಧಿಕಾರಿಗಳು, ದೊಡ್ಡಬಳ್ಳಾಪುರ ಅವರಿಗೆ ವಹಿಸಿದ್ದು, ಅವರು ತನಿಖಾ ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಈ ಕೆಳಕಂಡ ನ್ಯೂನ್ಯತೆಗಳನ್ನು ವರದಿ ಮಾಡಲಾಗಿರುತ್ತದೆ.

1) ನಾಮಫಲಕ ಮತ್ತು ದರ ದಾಸ್ತಾನು ಫಲಕ ಪ್ರದರ್ಶಿಸಿರುವುದಿಲ್ಲ.
2) ಕರ್ನಾಟಕ ಅಗತ್ಯ ವಸ್ತುಗಳ ನಿಯಂತ್ರಣ ಆದೇಶ 1992ರ ಪ್ರಕಾರ ಬಿಲ್ ಪುಸ್ತಕ, ದಿನವಹಿ ದಾಸ್ತಾನು, ಮತ್ತು ಮಾರಾಟ ಪುಸ್ತಕ ನಿರ್ವಹಿಸಿರುವುದಿಲ್ಲ.
3) ಫೆಬ್ರವರಿ,ಮಾರ್ಚ್ ಮತ್ತು ಏಪ್ರಿಲ್ 2014ರಲ್ಲಿ 5 ಪಡಿತರ ಚೀಟಿದಾರರಿಗೆ ನಿಗಧಿತ ದರಕ್ಕಿಂತ ಹೆಚ್ಚುವರಿ ಹಣ ಪಡೆದು ಬಿಲ್ ನೀಡಿರುವುದಿಲ್ಲ.
4) ಮಾರ್ಚ 2014ರಲ್ಲಿ 600 ಲೀಟರ್ ಸೀಮೆ ಎಣ್ಣೆ ಎತ್ತುವಳಿ ಮಾಡಿದ್ದು, ಆ ಪೈಕಿ 573 ಲೀಟರ್ ವಿತರಿಸಿ ಉಳಿದ 27 ಲೀಟರ್ ಬಗ್ಗೆ ವಿವರಣೆ ನಮೂದಿಸಿರುವುದಿಲ್ಲ.
5) ಏಪ್ರಿಲ್ 2014ರಲ್ಲಿ 600 ಲೀಟರ್ ಸೀಮೆ ಎಣ್ಣೆ ಎತ್ತುವಳಿ ಮಾಡಿದ್ದು, ಆ ಪೈಕಿ 599 ಲೀಟರ್ ವಿತರಿಸಿ ಉಳಿದ 1 ಲೀಟರ್ ಬಗ್ಗೆ ವಿವರಣೆ ನಮೂದಿಸಿರುವುದಿಲ್ಲ.
6) ಗಂಗಪ್ಪ ಚಿಲ್ಲರೆ ಸೀಮೆಎಣ್ಣೆ ವಿತರಕರು ಇವರ ಪಡಿತರ ಚೀಟಿ ಮತ್ತು ಮತದಾರ ಪಟ್ಟಿಯನ್ನು ಪರಿಶೀಲಿಸಿದಾಗ ಹೆಸರು ತಾಳೆಯಾಗಿರುವುದಿಲ್ಲ.

ಆದ್ದರಿಂದ ಇವರ ವಿರುದ್ದ ಕರ್ನಾಟಕ ಅಗತ್ಯ ವಸ್ತು ನಿಯಂತ್ರಣ ಆದೇಶ 1992ರ ಷರತ್ತು ಉಲ್ಲಂಘಿಸಿ ಸೀಮೆ ಎಣ್ಣೆ ವಿತರಣೆ ಮಾಡುತ್ತಿರುವುದರಿಂದ ಕಾನೂನುಕ್ರಮ ಜರುಗಿಸಬಹುದೆಂದು ಅಭಿಪ್ರಾಯಪಟ್ಟಿರುತ್ತಾರೆ.

157

6. ಈ ವರದಿಯಲ್ಲಿಯ ಅಂಶಗಳನ್ನು ಪರಿಶೀಲಿಸಿದಾಗ ಗಂಗಪ್ಪ ಅವರು ಅರೆಹಳ್ಳಿ ಗ್ರಾಮದಲ್ಲಿ ಸೀಮೆ ಎಣ್ಣೆ ವಿತರಿಸಿದ್ದು ಆದರೆ ಲೈಸೆನ್ಸ್ ಮರಿಯಪ್ಪ,ಕಬ್ಬಾಳಪ್ಪ ಎನ್ನುವವರ ಹೆಸರಿನಲ್ಲಿರುವುದು ಕಂಡುಬರುತ್ತದೆ. ಆದರೆ ಗ್ರಾಮಸ್ಥರ ಹೇಳಿಕೆ ಪ್ರಕಾರ ಗಂಗಪ್ಪನನ್ನು ರೂಢಿಯಲ್ಲಿ ಮರಿಯಪ್ಪ, ಕಬ್ಬಾಳಪ್ಪ ಎಂದು ಕರೆಯುತ್ತಾರೆಂದು ಸಹ ಕಂಡುಬರುತ್ತದೆ. ಆದರೆ ದಾಖಲೆಗಳಾದ ಪಡಿತರ ಚೀಟಿ, ಮತದಾರರ ಪಟ್ಟಿಯಲ್ಲಿ ಮರಿಯಪ್ಪ, ಎಂದು ದಾಖಲೆಗಳು ಇರುತ್ತವೆ. ಕಛೇರಿಯ ವ್ಯವಹಾರಗಳು ಗಂಗಪ್ಪನವರ ಹೆಸರಿನಲ್ಲಿ ನಡೆದಿರುತ್ತವೆ. ಅದರೆ ಗಂಗಪ್ಪನೇ ಮರಿಯಪ್ಪ ಎನ್ನುವ ಬಗ್ಗೆ ಯಾವುದೇ ಅಧಿಕೃತ ದಾಖಲಾತಿಗಳ ಪ್ರಕಾರ ಕಂಡುಬರುವುದಿಲ್ಲ.

7. ಕರ್ನಾಟಕ ಅಗತ್ಯ ವಸ್ತುಗಳ ನಿಯಂತ್ರಣ ಆದೇಶ 1992ರ ಪ್ರಕಾರ ಯಾವೊಬ್ಬ ಸೀಮೆ ಎಣ್ಣೆ ವಿತರಕನು ಸೀಮೆ ಎಣ್ಣೆ ವಿತರಣೆ ಸ್ಥಳದಲ್ಲಿ ನಾಮಫಲಕ ಮತ್ತು ದರ ದಾಸ್ತಾನು ಫಲಕ ಕಡ್ಡಾಯವಾಗಿ ಪ್ರದರ್ಶಿಸಬೇಕಾಗುತ್ತದೆ. ಆದರೆ ಈ ಪ್ರಕರಣದಲ್ಲಿ ಈ ರೀತಿ ಇಲ್ಲದಿರುವುದರಿಂದ ನ್ಯೂನ್ಯತೆ ಕಂಡುಬರುತ್ತದೆ. ಅದೇ ರೀತಿ ಸರಿಯಾಗಿ ಲೆಕ್ಕ ಪತ್ರ ನಿರ್ವಹಿಸದೆ ಇರುವುದು, ಹೆಚ್ಚುವರಿಯಾಗಿ ಹಣ ವಸೂಲು ಮಾಡಿರುವುದು, ಗ್ರಾಹಕರಿಗೆ ಬಿಲ್ ನೀಡದಿರುವುದು, ದಾಸ್ತಾನಿನ ಬಗ್ಗೆ ಲೆಕ್ಕ ಪತ್ರ ಇಡದೆ ಇರುವುದು ಕಂಡುಬರುತ್ತದೆ. ಈ ಬಗ್ಗೆ ದೂರುದಾರರು ಎದುರುದಾರರಿಗೆ ಅಗತ್ಯ ಕ್ರಮ ಕೈಗೊಳ್ಳಲು ವಿನಂತಿಸಿದರೂ ಸಹಾ ಎದುರುದಾರರು ಯಾವುದೇ ಕ್ರಮ ಜರುಗಿಸದಿರುವುದು ಕಂಡುಬರುತ್ತದೆ. ಸ್ವತ: ಎದುರುದಾರರೇ ಈ ನ್ಯೂನ್ಯತೆಗಳು ಇವೆ ಎಂದು ಒಪ್ಪಿಕೊಂಡಿರುತ್ತಾರೆ. ಆದ್ದರಿಂದ ಎದುರುದಾರರು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕ ಅಗತ್ಯ ವಸ್ತುಗಳ ಕಾನೂನಿನ ಅಡಿಯಲ್ಲಿ ಬರುವ ಈ ಅಕ್ರಮಗಳನ್ನು ತಡೆಯುವಲ್ಲಿ ವಿಫಲರಾಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

8. ಆದ್ದರಿಂದ, ಎದುರುದಾರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1) (i) ಮತ್ತು (ii) ರನ್ವಯ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾದ್ಯರಾಗಿರುವುದು ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ.12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು, ಕರ್ನಾಟಕ

156

ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14-ಎ ಅಡಿಯಲ್ಲಿ ಇಲಾಖಾ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ವಹಿಸಬೇಕೆಂದು ಕೋರಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಮಾಹಿತಿಯನ್ನು ಈ ವರದಿ ಸ್ವೀಕರಿಸಿದ ಮೂರು ತಿಂಗಳೊಳಗೆ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 12/6/17.

[ ನ್ಯಾಯಮೂರ್ತಿ ಸುಭಾಷ್ ಬಿ ಆಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.